# ನಂಬಿಕೆಯ ಫಲ



ಸಂತ ತುಕಾರಾಮರು ವಿಠಲನ ಪರಮ ಭಕ್ತರು, ಉತ್ತಮ ವಿದ್ವಾಂಸರು, ದೇವರು, ಜನರು ಹಾಗೂ ಭಕ್ತಿ ಸೇವೆಯ ಬಗ್ಗೆ ಚೆನ್ನಾಗಿ ತಿಳಿದವರಾಗಿದ್ದರು. ಒಮ್ಮೆ ತುಕಾರಾಮರು ಬೀದಿಯಲ್ಲಿ ಹೋಗುತ್ತಿರುವಾಗ ಸಾಲೋ ಮಾಲೋ ಎಂಬ ಹರಿಕೀರ್ತನಾಕಾರ ಅವರನ್ನು ನೋಡಿ, 'ಏನು ತುಕಾಜಿಯವರೇ, ಮನೆ ಹಾಳು ಮಾಡಿದಿರಿ. ಕೂಳುಗೇಡಿಯಾದಿರಿ. ಹೆಂಡಿರ–ಮಕ್ಕಳ ಕೈಯಲ್ಲಿ ಬೋಕಿ ಕೊಟ್ಟಿರಿ. ಈಗ ಸಂತನ ಸೋಗು ಹಾಕಿಕೊಂಡು ಎಲ್ಲಿಗೆ ಹೊರಟಿರುವಿರಿ?, ಎಂದು ಕರುಳಿಗೆ ಮುಳ್ಳು ಚುಚ್ಚುವಂತೆ ಕೇಳಿದ. ಈ ಮಾತು ಕೇಳಿ ತುಕಾರಾಮರು ಮನಸ್ಸಿಗೆ ಹಚ್ಚಿಕೊಳ್ಳದೆ, 'ಎಲ್ಲಿಗೂ ಇಲ್ಲ. ಕೆಲಸ ಹುಡುಕುತ್ತಿದ್ದೇನೆ' ಎಂದರು.

'ನಿಮ್ಮ ತುಂಬಿದ ಮನೆ ಹಾಳು ಮಾಡಿದಿರಿ. ಮಕ್ಕಳು ವಿಲಿವಿಲಿ ಒದ್ದಾಡಿದರೂ ನೋಡದಂತಾದಿರಿ. ಕಂಡವರ ಕೈಕಾಲು ಹಿಡಿದು ಸಾಲ ತಂದು ಸಂಸಾರ ಸಾಗಿಸುವ ಜೀಜಾಬಾಯಿಯನ್ನು ಕಡೆಗಣಿಸಿದಿರಿ, ನಿಮ್ಮ ಸಂಸಾರವೇ ನಿಮಗೆ ಗೊತ್ತಿಲ್ಲ. ನಿಮ್ಮಂಥವರಿಗೆ ಯಾರು ಕೆಲಸ ಹಚ್ಚಬೇಕು? ಭಿಕ್ಷೆ ಬೇಡಿರಿ. ಭಿಕ್ಷೆಯೊಂದೇ ತಕ್ಕ ಉದ್ಯೋಗ' ಎಂದು ಹೀಯಾಳಿಸಿದ.

'ಭಿಕ್ಷೆ' ಎಂಬ ಶಬ್ದ ಬಿದ್ದೊಡನೆ ತುಕಾರಾಮರಿಗೆ ಎಂದೂ ಇಲ್ಲದ ಸಿಟ್ಟು ಬಂತು. ಥಟ್ಟನೆ ಕಣ್ಣು ಹನಿಗೂಡಿದವು. 'ಪಾಂಡುರಂಗ, ಪಾಂಡುರಂಗ' ಎಂದು ಕಿವಿ ಮುಚ್ಚಿಕೊಂಡರು.

ಜ್ಞಾನೋಬಾ ಎಂಬಾತನು ಈ ಮಾತು, ಕೇಳಿ 'ಬನ್ನಿರಿ ತುಕಾರಾಮರೆ, ಎಲ್ಲರನ್ನೂ ಜೋಪಾನ ಮಾಡುವ ದೇವರು ದೊಡ್ಡವನಿದ್ದಾನೆ. ನಾಳೆ ನಾನು ಆಳಂದ ಗ್ರಾಮಕ್ಕೆ ಹೋಗುತ್ತೇನೆ. ನಾನು ಬರುವವರೆಗೆ ನನ್ನ ಹೊಲ ಕಾಯಿರಿ' ಎಂದು ತುಕಾರಾಮರಿಗೆ ಹೇಳಿ ಅವರನ್ನು ಕರೆದುಕೊಂಡು ಹೋಗಿ ಹೊಲ ತೋರಿಸಿದನು.

ಮರುದಿನ ಸಂತ ತುಕಾರಾಮರು ಜ್ಞಾನೋಬಾ ಹೊಲ ಕಾಯಲು ಬಂದರು, ಹೊಲದ ತುಂಬೆಲ್ಲ ಒಮ್ಮೆ ಕಣ್ಣಾಡಿಸಿ ನೋಡಿದರು. ಹೊಲದ ತುಂಬಾ ಬೆಳೆ ಬೆಳೆದು ನಿಂತಿತ್ತು. ಎತ್ತ ನೋಡಿದರತ್ತ ಹಚ್ಚ ಹಸಿರು. ತೆನೆ ಸುಂಕಕಟ್ಟಿ ಕಾಳು ತುಂಬುವುದರಲ್ಲಿತ್ತು. ಇದನ್ನು ನೋಡಿ ತುಕಾರಾಮರು, 'ಎಲ್ಲವೂ ಪಾಂಡುರಂಗನ ಕೃಪೆ, ಒಂದು ಬೀಜಕ್ಕೆ ಎಷ್ಟೊಂದು ಧಾನ್ಯ ಬೆಳೆದಿದೆ. ಎಲ್ಲದರಲ್ಲಿಯೂ ಪಾಂಡುರಂಗನೆ ತುಂಬಿದ್ದಾನೆ, ಎಲ್ಲವೂ ಅವನ ಅಗಾಧವಾದ ಲೀಲೆ' ಎನ್ನುತ್ತಾ ಧ್ಯಾನ ಮಗ್ನರಾದರು.

ಪಾಂಡುರಂಗನ ಧ್ಯಾನದಲ್ಲಿ ತಲ್ಲಿನರಾಗಿ ಹೋದ ಸಂತ ತುಕಾರಾಮರನ್ನು ಸಾಲೋ ಮಾಲೋ ನೋಡಿದನು. ಇವರಿಗೆ ತೊಂದರೆ ಕೊಡಲು ಇದೇ ಸರಿಯಾದ ಸಮಯವೆಂದು ತಿಳಿದು ಊರಲ್ಲಿ ಅಡ್ಡಾಡುವ ದನಗಳನ್ನು ಹೊಲದಲ್ಲಿ ಹೊಗಿಸಿ ತಾನು ಅಲ್ಲಿಂದ ಪಾರಾದನು. ಭಗವಂತನ ಧ್ಯಾನದಲ್ಲಿದ್ದ ಸಂತ ತುಕಾರಾಮರಿಗೆ ಎಚ್ಚರವೇ ಇಲ್ಲ. ಹೊಲ ಸಂಪೂರ್ಣ ಹಾಳಾಗಿ ಹೋಯಿತು.

ಊರಿಗೆ ಹೋಗಿದ್ದ ಜ್ಞಾನೋಬಾ ಬಂದನು. ತನ್ನ ಹೊಲ ಹಾಳಾದ ಸುದ್ದಿ ಕೇಳಿ ಕಂಗಾಲಾದನು, ತುಕಾರಾಮರ ಮೇಲೆ ಭಯಂಕರ ಸಿಟ್ಟು ಬಂತು. ಅದೇ ಹೊತ್ತಿನಲ್ಲಿ ಸಾಲೋ ಮಾಲೋ ಬಂದು, 'ಏನು ಜ್ಞಾನೋಬಾ ಹೊಲದ ಕಡೆಗೆ ಹೋಗಿದ್ದೀಯಾ?' ಎಂದು ಕೇಳಿದಾಗ ಜ್ಞಾನೋಬಾ ಚಿಂತೆಯಿಂದ ತಲೆ ಕೆಳಗೆ ಹಾಕಿ ಸುಮ್ಮನೆ ಕುಳಿತಿದ್ದ. ಮತ್ತೆ ಸಾಲೋ ಮಾಲೋ, 'ಮೊದಲೇ ನಾನು ಹೇಳಿದ್ದೆ, ಅಂತಹ ದರಿದ್ರರಿಗೆ ಹೊಲ ಕಾಯಲು ಹಚ್ಚಬೇಡವೆಂದು, ಈಗ ಅದರ ಪ್ರತಿಫಲ ಉಣ್ಣು. ಅಷ್ಟೇ ಅಲ್ಲ ನನ್ನ ಪಾಲಿಗೆ ಬರಬೇಕಾದ ಒಂದು ಕಾಳು ಧಾನ್ಯವನ್ನೂ ನಾನು ಬಿಡುವವನಲ್ಲ. ಇನ್ನು ನೀನು ಎಲ್ಲಿಂದ ತಂದು ಕೊಡುತ್ತಿ ನೋಡೋಣ' ಎಂದು ನಾನಾ ರೀತಿ ಅಂಜಿಕೆ ಹಾಕಿ ಮಾತನಾಡಿದ.

ಸಾಲೋ ಮಾಲೋ ತುಕಾರಾಮರನ್ನು ಬಯ್ದು ಅವರನ್ನು ಗೌಡರ ಹತ್ತಿರ ತೀರ್ಮಾನಕ್ಕೆ ಕರೆದೊಯ್ದು. ಜ್ಞಾನೋಬಾನ ಹೊಲ ಹಾಳು ಮಾಡಿದ ತಪ್ಪಿಗೆ ತುಕಾರಾಮರ ಮನೆಯನ್ನು ಜ್ಞಾನೋಬಾನಿಗೆ ಬರೆದುಕೊಡಬೇಕೆಂದು ಗೊತ್ತು ಮಾಡಿದರು, ಅದರಂತೆ ಕಾಗದ ಪತ್ರಗಳು ಆದವು.

ಹೊಲದಲ್ಲಿ ಇದ್ದ ಬಿದ್ದ ದಂಟನ್ನು ಜೋಡಿಸಿ ತೆನೆಗಳನ್ನು ಕೂಡಿಸಿ ಜೋಪಾನ ಮಾಡುತ್ತಾ ಕಣ್ಣೀರು ಹಾಕತೊಡಗಿದ ಜ್ಞಾನೋಬಾನಿಗೆ ಎಲ್ಲವೂ ಪಾಂಡುರಂಗನ ಲೀಲೇ ಅವನೇ ನಮ್ಮೆಲ್ಲರನ್ನೂ ರಕ್ಷಿಸುವನು' ಎಂದು ತನ್ನ ತಾನೇ ಸಾವರಿಸಿಕೊಳ್ಳುತ್ತಿದ್ದ. ಹೀಗೆ ಧೈರ್ಯ–ಅಧೈರ್ಯಗಳ ಮಧ್ಯದಲ್ಲಿ ಹೊಲದಲ್ಲಿಯ ಜೋಳ ಕೊಯ್ದು ಸೂಡು ಕಟ್ಟಿದ. ಕಣ ಮಾಡಿ, ತೆನೆ ಮುರಿದ, ಪಾಂಡುರಂಗನನ್ನು ನೆನೆಯುತ್ತಾ ರಾಶಿ ಮಾಡಿದ. ಇಪ್ಪತ್ತು ಖಂಡಿ ಆಯಿತು ರಾಶಿ! ಜ್ಞಾನೋಬಾ ಸಂತೋಷಕ್ಕೆ ಮೇರೆಯೇ ಇಲ್ಲದಂತಾಯಿತು. ಸಾಲೋ ಮಾಲೋ ಪಾಲನ್ನು ತೆಗೆದು ತನ್ನ ಪಾಲನ್ನು ಇಟ್ಟುಕೊಂಡು, ಉಳಿದ ಜೋಳದ ರಾಶಿಯನ್ನು ಬಂಡಿಯ ಮೇಲೇರಿಸಿ ತುಕಾರಾಮರ ಮನೆಗೆ ಸಾಗಿಸಿದ. ತುಕಾರಾಮರ ಪಾದಕ್ಕೆ ನಮಸ್ಕರಿಸಿ 'ತಮ್ಮ ಮಹಿಮೆಯು ಅಸಾಧ್ಯವಾದುದು. ತಮ್ಮ ಉಪಕಾರ ಗುಣವನ್ನು ಅರಿಯದೆ ತಿಳಿಗೇಡಿಯಾದೆ ನಾನು ಮನೆ ಬರೆಯಿಸಿಕೊಂಡು ಮನ ನೋಯಿಸಿದೆ. ನನ್ನ ಅಪರಾಧವನ್ನು ಕ್ಷಮಿಸಿರಿ. ನನ್ನ ಲೆಕ್ಕಕ್ಕೆ ಮೀರಿ ಬೆಳೆದ ಈ ಜೋಳದ ರಾಶಿ ತಮಗೆ ಸಲ್ಲತಕ್ಕದ್ದು' ಎಂದು ವಿನಯದಿಂದ ಪ್ರಾರ್ಥಿಸಿದ.

(ಸಂಗ್ರಹ) **ಶ್ರೀಕಾಂತ ಹಾದಿಮನಿ, ಶಿರಹಟ್ಟಿ**